

# ನಿದ್ರಾದೇವಿ

■ ನಾಗೇಂದ್ರ ಚಕ್ರಗಿರಿ
ಕಲೆ: ಸಂತೋಷ್ ಸಸಿಹಿತ್ಲು

ಒಂದು ಹಳ್ಳಿಯಲ್ಲಿ ರಾಮಣ್ಣನೆಂಬ ಯುವಕನಿದ್ದ. ಪ್ರತಿದಿನ ಕಾಡಿಗೆ ತೆರಳಿ ಮರಗಳನ್ನು ಕಡಿದು, ಅದರಿಂದ ಸೌದೆ ಮಾಡಿ, ಅದನ್ನು ಪಟ್ಟಣದಲ್ಲಿ ಮಾರಿ, ಬಂದ ಹಣದಿಂದ ತನ್ನ ಹಾಗೂ ತನ್ನ ಹೆಂಡತಿಯ ಹೊಟ್ಟೆ ಹೊರೆಯುತ್ತಿದ್ದ. ಕಷ್ಟಪಟ್ಟು ಕೆಲಸ ಮಾಡಿ ಜೀವನಕ್ಕೆ ಸಾಕಾಗುವಷ್ಟು ಸಂಪಾದನೆ ಮಾಡುತ್ತಿದ್ದ. ಉಣ್ಣಲು, ಉಡಲು ಕೊರತೆಯಿಲ್ಲದಿದ್ದರೂ, ಅವನನ್ನು ಸಮಸ್ಯೆಯೊಂದು ಕಾಡುತ್ತಿತ್ತು. ಮರ ಕಡಿದು, ಸೌದೆ ಮಾಡಿ ಅದನ್ನು ಪಟ್ಟಣಕ್ಕೆ ಹೊತ್ತೊಯ್ದು ಮಾರುವುದು ತುಂಬ ಪ್ರಯಾಸದ ಕೆಲಸವಾಗಿತ್ತು. ಸಂಜೆ ಮನೆಗೆ ಹಿಂತಿರುಗುವ ಹೊತ್ತಿಗೆ ತುಂಬ ದಣಿದು ಹಸಿದಿರುತ್ತಿದ್ದ. ಹೊಟ್ಟೆ ತುಂಬ ಊಟ ಮಾಡಿ ರಾತ್ರಿ ಮಲಗಿದರೆ, ಎಷ್ಟೇ ದಣಿದಿದ್ದರೂ ಕಣ್ತುಂಬ ನಿದ್ದೆ ಬರುತ್ತಿರಲಿಲ್ಲ. ಸ್ವಲ್ಪ ನಿದ್ದೆ, ಸ್ವಲ್ಪ ಎಚ್ಚರ, ಮತ್ತೆ ನಿದ್ದೆ. ಹೀಗೇ ರಾತ್ರಿ ಕಳೆಯುತ್ತಿತ್ತು. ಸುಖ ನಿದ್ದೆ ಅವನಿಗೆ ಕನಸಾಗಿತ್ತು. ಹಾಗೆಂದು ಯಾವ ಚಿಂತೆಗಳೂ ಅವನಿಗೆ ಇರಲಿಲ್ಲ. ಮಾಡುವ ಕೆಲಸದಲ್ಲಿ ಆಸಕ್ತಿಯಿತ್ತು. ಅನುಸರಿಸಿಕೊಂಡು ಹೋಗುವ ಜಾಣೆಯಾದ ಹೆಂಡತಿಯಿದ್ದಳು. ಬಂದ ಸಂಪಾದನೆಯಲ್ಲಿ ಅಚ್ಚುಕಟ್ಟಾಗಿ ಸಂಸಾರ ನಡೆಸಿಕೊಂಡು ಹೋಗುತ್ತಿದ್ದಳು. ಅವಳೂ ಗಂಡನ ನಿದ್ದೆಯ ಕೊರತೆಯಿಂದ ಚಿಂತಿತಳಾಗಿದ್ದಳು.

ಬರುಬರುತ್ತಾ ರಾಮಣ್ಣನ ನಿದ್ದೆಯ ಸಮಸ್ಯೆ ಹೆಚ್ಚಾಗತೊಡಗಿತು. ಕೆಲಸ ಮಾಡಿದ ಆಯಾಸ ಪರಿಹಾರವೇ ಆಗುತ್ತಿರಲಿಲ್ಲ. ಇದು ಅವನ ವೃತ್ತಿಯ ಮೇಲೆ ಪರಿಣಾಮ ಬೀರತೊಡಗಿತು. ಸಂಪಾದನೆ ಕಡಿಮೆಯಾಗತೊಡಗಿತು. ಪರಿಹಾರಕ್ಕಾಗಿ ಹಲವಾರು ವೈದ್ಯರ ಬಳಿ ಹೋದರೂ ಉಪಯೋಗವಾಗಲಿಲ್ಲ. ಗಂಡ ಹೆಂಡತಿ ಇಬ್ಬರೂ ತಲೆ ಮೇಲೆ ಕೈ ಹೊತ್ತು ಕುಳಿತರು. ರಾಮಣ್ಣನ ಹೆಂಡತಿಯಂತೂ ಕಂಡ ಕಂಡ ದೇವರುಗಳಿಗೆಲ್ಲಾ ಮೊರೆ ಹೋದಳು. ಆದರೆ ರಾಮಣ್ಣನ ಸಮಸ್ಯೆ ಹಾಗೇ ಉಳಿಯಿತು.

ಒಂದು ದಿನ ಊರಾಚೆಯಿದ್ದ ದೇವಸ್ಥಾನದಲ್ಲಿ ದೇವರ ಮುಂದೆ ಕುಳಿತು ಪ್ರಾರ್ಥಿಸುತ್ತ ಸಣ್ಣಗೆ ಅಳುತ್ತಿದ್ದಳು. ಅವಳನ್ನೇ ಗಮನಿಸುತ್ತಿದ್ದ ಆ ದೇವಸ್ಥಾನದ ಅರ್ಚಕರು ಅವಳ ದುಃಖಕ್ಕೆ ಕಾರಣವೇನೆಂದು ಪ್ರಶ್ನಿಸಿದರು. ಆಗ ಅವಳು ತನ್ನ ಗಂಡನ ನಿದ್ರಾಹೀನತೆಯ ಬಗ್ಗೆ ತಿಳಿಸಿದಳು. ಅರ್ಚಕರು ಸ್ವಲ್ಪ ಹೊತ್ತು ಯೋಚನೆ ಮಾಡಿ, ರಾಮಣ್ಣ ಪ್ರತಿ ದಿನ ರಾತ್ರಿ ಮಲಗುವ ಮುಂಚೆ ನಿದ್ರಾದೇವಿಯ ಸ್ಮರಣೆ ಮಾಡುವಂತೆ ಸಲಹೆ ಮಾಡಿದರು. ಒಂದು ಸರಳವಾದ ಪ್ರಾರ್ಥನೆಯನ್ನೂ ಹೇಳಿಕೊಟ್ಟರು.

ಅವಳು ಕೂಡಲೇ ಮನೆಗೆ ಹೋಗಿ ಅರ್ಚಕರು ಹೇಳಿದ್ದನ್ನೆಲ್ಲ ಗಂಡನಿಗೆ ತಿಳಿಸಿದಳು. ಅವರ ಸಲಹೆಯಂತೆ ರಾಮಣ್ಣ ಪ್ರತಿ ದಿನ ರಾತ್ರಿ ಮಲಗುವ ಮುನ್ನ ನಿದ್ರಾದೇವಿಯ ಸ್ಮರಣೆ, ಪ್ರಾರ್ಥನೆ ಮಾಡತೊಡಗಿದ.

ಹೀಗೇ ಕೆಲವು ದಿನ ನಡೆಯಿತು. ಒಂದು ದಿನ ರಾತ್ರಿ ಸ್ವಲ್ಪ ನಿದ್ದೆ ಹತ್ತಿದಾಗ ರಾಮಣ್ಣನಿಗೆ ಕನಸಿನಲ್ಲಿ ನಿದ್ರಾದೇವಿ ಕಾಣಿಸಿಕೊಂಡು 'ರಾಮಣ್ಣ, ನಿನ್ನ ಸಮಸ್ಯೆ ಏನು. ಪ್ರತಿ ದಿನ ನನ್ನ ಸ್ಮರಣೆ,